ಕೋಲಾರ ಡಿಸ್ಟ್ರಿಕ್ಟು.

ತಾರೀಖು 17ನೇ ಏಪ್ರಿಲ್ 1895ನೇ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿರುವ ಸಬ್ ರಿಜಿಸ್ಟ್ರಾರ್ ಆಫಿಸಿನಲ್ಲಿ ಬೇವಾರಸಾಗಿರುವ ದಸ್ತಾವೇಜುಗಳನ್ನು ಕ್ರಯವಾದ ವಾಸ್ದಾರ್‌ರಾಗಲಿ ಅಥವಾ ಅವರಿಂದ ಕ್ರಯವಾದ ಅಧಿಕಾರ ಪಡದುಕೊಂಡ ಮುತಾಲೀಕರಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ಆ ಸಬ್ ರಿಜಿಸ್ಟ್ರಾರ್ರ ಮುಂದೆ ಹಾಜರಾಗಿ ವಾಪಸ್ ತೆಗದುಕೊಂಡು ಹೋಗಬಹುದು, ಇಲ್ಲವಾದರೆ ಇಂಡಿಯನ್ ರೆಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ಅವುಗಳನ್ನು ನಾಶಪಡಿಸಲಾಗುವುದು.

ಆಫೀಸ್ ಹೆಸರು.	ದಸ್ತಾವೇಜಿನ ನಂಬರು.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ಅಡ್ಡ ಹೆಸರು ವಾಸಸ್ಥಾನ ವಗೈರೆ.	ದಸ್ತಾವೇಜು ಬರಿಸಿಕೊಂಡವರ ಹೆಸರು ಮತ್ತು ಅಡ್ಡ ಹೆಸರು ವಾಸಸ್ಥಾನವಗೈರೆ.	ದಸ್ತಾವೇಜಿನ ತಾರೀಖು.	ರೆಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
ಮೂಲೂರು	179 1892—93	1 ಮೂಲೂರು ಈಸಬಾದಲ್ಲಿರುವ ವುಸ್ಮರ್ಖಾರ್ ಕಂಪೆನಿಗೆ ಕೇರಿದ ವುಸ್ಮರ್ಖಾರ್ 2 ಮೇಲ್‌ವಿಷಾರಂ ಖಾದರ್ ಹುಸೇನ್‌ಸಾಬಿ 3 ಅಬ್ದುಲ್‌ಖಾದರ್ ಸಾಬಿ	ಮೇಲ್‌ವಿಷಾರಂ ಅಮಿನುದೀನ್‌ಸಾಬಿ ಮಗ ಅಬ್ದುಲ್ ಅಜೀಜ್‌ಸಾಬಿ	1892ನೇ ಇಸವಿ ಜೂನ್ ತಾರೀಖು 1	1892ನೇ ಇಸವಿ ಅಕ್ಟೋಬರ್ ತಾರೀಖು 10	800 ರೂಪಾಯಿಗೆ ಸರ್ವೆ ನಿಡಗಳನ್ನು ಕ್ರಯಮಾಡಿರುವದಾಗಿ
	180 1892—93	1 ಮೂಲೂರು ಈಸಬಾದಲ್ಲಿರುವ ವುಸ್ಮರ್ಖಾರ್ ಕಂಪೆನಿ ಏಜಂಟ್ ಮೇಲ್‌ವಿಷಾರಂ ಅಮಿನುದೀನ್‌ಸಾಹೆಬರ ಮಗ ಖಾದರ್ ಹುಸೇನ್‌ಸಾಬಿ 2 ವುಸರ್ಮಾರ್ಖಾರ್ 3 ಅಬ್ದುಲ್‌ಖಾದರ್‌ಸಾಬಿ	ಮೇಲ್‌ವಿಷಾರಂ ಅಮಿನುದೀನ್‌ಸಾಬಿ ಮಗ ಅಬ್ದುಲ್ ಅಜೀಜ್‌ಸಾಬಿ	1892ನೇ ಇಸವಿ ಜೂನ್ ತಾರೀಖು 1	1892ನೇ ಇಸವಿ ಅಕ್ಟೋಬರ್ ತಾರೀಖು 10	200 ರೂಪಾಯಿಗೆ ಸರ್ವೆ ಮರಗಳನ್ನು ಕ್ರಯಮಾಡಿರುವದಾಗಿ

ಅಬ್ದುಲ್‌ಅಜೀಜ್,
ಫಾರ್ ರೆಜಿಸ್ಟ್ರಾರ್.

ಸ್ಥಿರಸ್ವತ್ತಿನ ಹರಾಜು ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

ತಾರೀಖು 13ನೇ ಏಪ್ರಿಲ್ 1895.

1. ಜೋಡಿ ಮತ್ತು ಕಾಯಂಗುತ್ತಾ ಬಾಕೀದಾರರಾದ ವೆಂಕಂಭಟ್ಟ ವಗೈರೇರಿಂದ ಬರಬೇಕಾದ ಜಮೀರ್ ಕಂದಾಯದ ಬಾಕಿಗಾಗಿ ಫಾರ್‌ಫಿಟ್ ಮಾಡಲ್ಪಟ್ಟ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಅಮಲ್‌ದಾರ್ರ ಕಚೇರೀಲಿ 1895ನೇ ಇಸವಿ ಮೇ 31ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜ್ ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟುಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ವಿಷದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜ್‌ದಾರನು 1894—95ನೇ ಸಾಲಿಗೆ ಪೂರ್ತಿಯಾಗಿ* ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಖ್ಮೀಲ್ ಮೇರಿಗೆ 135—3—4 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25ನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜ್ಞಾತಾ ಹರಾಜ್ ಬಾಬತು ಬಾಕಿ ಮೊಬಲಗು ಹರಾಜ್ ತಾರೀಖು ಲಾಗಾಯತು ಏಳನೆಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂತಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ, ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್‌ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕೆಕ್ಕೆ ಸ್ವರ ಸವಾಲ್ ಮಾಡುತ್ತಾರೆಯೇ, ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ, ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂತಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ, ಕೇಳಲ್ಪಡಬಹುದು. ಆದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲ್‌ಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮ್ಮಿಷನರವರಿಂದ ಸ್ಕ್ರ್ ಮೊಹರ್ ಮಾಡಲ್ಪಟ್ಟ ಬಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು ಸ್ವತ್ತಿನ ವಿವರಣೆಯಲ್ಲಿಯಾಗಲಿ ಯಾ ವಿಸ್ತೀರ್ಣದಲ್ಲಿಯಾಗಲಿ ಇರುವ ಸ್ಕಲತ್ಯಗಳಿಗೆ ಗವರ್ಮೆಂಟನವರು ಜವಾಬ್ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ವುಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯೂಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂತಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಒದ್ದಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರನ ಹೆಸರು.	ಸ್ವತ್ತಿನ ತಫ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಮಿಷ್ಕೀ ತರೀ ಅಥವಾ ಬಾಗಾಯತು.	ವಿಸ್ತೀರ್ಣ.		ಅಕಾರ.			ಸರಾಸರಿ ಬರಬೇಕಾದ ನೋಟಿಸ್ ಫೀ. ಪಗ್ಗೈರಿ ಸಹಿತವಾದ ಬಾಕಿ ಮೊಬಲಗು.		
					ರೂ. ಆ. ಪೈ.			ಖಂಡಿ.	ಕು.	ರೂ.	ಆ.	ಪೈ.	ರೂ.	ಆ.	ಪೈ.
1	2	3	4	5	6	7	8	9		10			11		
ಕೋಲಾರ	ಸುಗಟೂರು	ನೋನವಿಂಕುಂಟೆ	ವೆಂಕಂಭಟ್ಟ	..	.. .. ..	ಗ್ರಾಮದಲ್ಲಿ ಬಾಕೀದಾರನಿಗೆ ಇರುವ $\frac{1}{10}$ ಪಾಲು	ಖುಷ್ಕಿ	55	$2\frac{3}{4}$	350	3	9	26	14	3
							ತರೀ			247	4	0			
							ಬಾಗಾಯತು			25	14	10			
							ಜೋಡಿ								
							ಲೋಕಲ್‌ಸೆಸ್			273	2	10			
		ಮೊಟ್ಟನಹಳ್ಳಿ	ರಾಮುಪ್ಪ	..	.. .. ..	ಗ್ರಾಮದಲ್ಲಿ ಬಾಕೀದಾರನಿಗೆ ಇರುವ $\frac{1}{8}$ ಪಾಲು	ಖುಷ್ಕಿ	15	$10\frac{3}{4}$	296	11	8	32	5	0
							ತರೀ			224	0	0			
							ಬಾಗಾಯತು			18	8	9			
							ಜೋಡಿ								
							ಲೋಕಲ್‌ಸೆಸ್			242	8	9			
	ವೇಮಗಲ್	ಬೂಲನಾಗನಹಳ್ಳಿ	ಶೀನಪ್ಪ ರುಕ್ಮಿಣಿಅಮ್ಮ	..	.. .. ..	ಪೂರಾ ಗ್ರಾಮ	ಖುಷ್ಕಿ	14	$13\frac{1}{2}$	80	9	8	76	0	1
							ತರೀ			71	0	0			
							ಬಾಗಾಯತು			5	0	1			
							ಕಾಯಂಗುತ್ತಾ								
							ಲೋಕಲ್‌ಸೆಸ್			76	0	1	ಕುಲ್		
													135-3-4		

ಪರಾ—ಮೊದಲಿನ ಇನಾಂದಾರು ಮಾಡಿದ ಭೋಗ್ಯ ವಗೈರೆ ಭಾರವಿಲ್ಲದೆ ಹರಾಜ್ ಮಾಡಲ್ಪಡುತ್ತೆ.

ಸಿ. ಮಾದಯ್ಯ,
ಡೆಪ್ಯೂಟಿ ಕಮ್ಮಿಷನರ.